## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## Crl. Misc. 775/2023

ಫ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 04-07-2025

| | | |
|---|---|---|
| ಹೆಸರು | : | ಉಮಾದೇವಿ |
| ಗಂಡನ ಹೆಸರು | : | ಯೋಗಿನಾಥ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | : | ಚಿನಮಗೇರಾ,<br>ಗಂಡನ ಮನೆ ಸುಲೇಜೇವಳಗಿ, ತಾಃ ಅಫಜಲಪೂರ |

**-: ಸಾಕ್ಷಿಯ ಮೌಖಿಕ ಹೇಳಿಕೆ :-**

ದಿನಾಂಕಃ 31-03-2019 ರಂದು ನನ್ನ ಮದುವೆ ಎದುರುದಾರನ ಮನೆಯ ಮುಂದೆ ಮದುವೆ ಆಗಿರುತ್ತದೆ. ಎದುರುದಾರ ಮತ್ತು ನಾನು 6 ತಿಂಗಳ ಚೆನ್ನಾಗಿ ಇದ್ದೇವೆ. ನಾನು ಗರ್ಭ ಧರಿಸಿದ ನಂತರ ಎದುರುದಾರನು ನನ್ನೊಂದಿಗೆ ಜಗಳ ತೆಗೆಯಲು ಪ್ರಾರಂಭಿಸಿರುತ್ತಾನೆ. ನನ್ನ ತಂದೆ ಮದುವೆ ಸಮಯದಲ್ಲಿ 4 ತೊಲೆ ಬಂಗಾರ, 1 ಲಕ್ಷ ರೂಪಾಯಿ ಮತ್ತು ಮನೆಗೆ ಸಂಬಂಧಿಸಿದ ಸಾಮ್ರಾಗ್ರಿಗಳನ್ನು ಉಡುಗೊರೆ ನೀಡಿರುತ್ತಾರೆ. ನನ್ನ ತಂದೆ ಕೂಲಿ ಕೆಲಸ ಮಾಡಿ ಸಾಲವನ್ನು ಮಾಡಿ ನನ್ನ ಮದುವೆ ಮಾಡಿರುತ್ತಾರೆ. ನನ್ನ ಗಂಡ ನನಗೆ ದಿನಾಲೂ ಕಿರಿಕಿರಿ ಮಾಡಿ ಹೊಡೆಬಡೆ ಮಾಡುತ್ತಿರುತ್ತಾರೆ. ನನ್ನ ಅತ್ತೆ ನಾನು ಹೇಳಿದ್ದು ಕೇಳು ಅಂತ ಹೇಳುತ್ತಾರೆ. ಮನೆಗೆ ಯಾರಾದರೂ ಬಂದರೆ ಅವರಿಗೆ ಊಟಕ್ಕೆ ನೀಡು ಮತ್ತು ಅವರು ಹೇಗೆ ಹೇಳುತ್ತಾರೆ ಹಾಗೆ ಕೇಳು ಎಂದು ಹೇಳುತ್ತಾರೆ. ಎದುರುದಾರನದು ಹೊಲದಲ್ಲಿ ಮನೆ ಇರುತ್ತದೆ. ಯಾರಿಗೆ ಹೇಳದಂತೆ ನನ್ನ ಮೈಮೇಲೆ ಬಟ್ಟೆ ಬಿಚ್ಚಿ ಹೊರಗೆ ಹಾಕುತ್ತಾರೆ. ಆಮೇಲೆ ನಾನು ತವರು ಮನೆಗೆ ಬಂದಿರುತ್ತೇನೆ. ನನ್ನ ಪ್ರಸೂತಿ ಆದ ನಂತರ ಎದುರುದಾರರು ಬಂದು ಕರೆದುಕೊಂಡು ಹೋಗಿರುತ್ತಾರೆ. ಬೇರೆ ಮನೆ ಮಾಡಿ ಇಟ್ಟಿರುತ್ತಾರೆ. ನನ್ನ ಅತ್ತೆ ಬಂದು ನಮ್ಮ ಮದೆ ್ಯ

ಜಗಳ ತೆಗೆಯುತ್ತಾರೆ. ಎದುರುದಾರನಿಗೆ ನಾನು ಕೇಳಿದಾಗ ಅವರು ಹೇಳಿದಂತೆ ಕೇಳು ಇಲ್ಲದಿದ್ದಲ್ಲಿ ಮಗು ನನ್ನದಲ್ಲ ಎಂದು ಹೇಳುತ್ತಾರೆ.

ದಿನಾಂಕಃ 25-08-2021 ರಂದು ನನ್ನನ್ನು ಎದುರುದಾರ ಮನೆಯಿಂದ ಹೊರ ಹಾಕಿರುತ್ತಾರೆ. ನಂತರ ಪಂಚಾಯತಿ ಆಗಿರುತ್ತದೆ. ಊರಿನ ಎಲ್ಲಾ ಜನರು ನನಗೆ ತವರು ಮನೆಗೆ ಹೋಗು ಎಂದು ಹೇಳಿದರಿಂದ ನಾನು ತವರು ಮನೆಗೆ ಬಂದಿರುತ್ತೇನೆ. ಎದುರುದಾರನ ಮನೆಯವರು ಹಾಗೆ ಇರುತ್ತಾರೆ ಎಂದು ನುಡಿಯುತ್ತಾರೆ. ಮತ್ತೆ ನಾನು ದಿನಾಂಕಃ 15-08-2023 ರಂದು ನಾನು ಗಂಡನ ಮನೆಗೆ ಹೋಗಿರುತ್ತೇನೆ. ನಾನು ನನ್ನ ಉಪಜೀವನಕ್ಕೆ ಏನಾದರೂ ಕೊಡಿ ಎಂದು ಕೇಳಿರುತ್ತೇನೆ. ಏನಾದರೂ ಮಾಡಿ ನಾನು ಕೊಡುವುದಿಲ್ಲ ಎಂದು ನುಡಿಯುತ್ತಾರೆ. ಆ ಮೇಲೆ ನಾನು ಈ ಅರ್ಜಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ.

ಎದುರುದಾರನದು 12 ಎಕರೆ 20 ಗುಂಟೇ ಜಮೀನು ಇರುತ್ತದೆ ಹಾಗೂ ಕ್ರೂಸರ ವಾಹನ ಇರುತ್ತದೆ. ಎದುರುದಾರನು ಅದನ್ನು ಚಾಲನೇ ಮಾಡಿ ದಿನಕ್ಕೆ 3 ಸಾವಿರ ರೂ. ಗಳಿಕೆ ಮಾಡುತ್ತಾರೆ. ಅಕ್ಕ ಪಕ್ಕದ ಜಮೀನುಗಳು ಸಹ ಸಾಗುವಳಿ ಮಾಡುತ್ತಾರೆ. ಕಬ್ಬು ಬಾಳೆ ಬೆಳೆಗಳನ್ನು ಬೆಳೆಯುತ್ತಾರೆ. ವರ್ಷಕ್ಕೆ 10 ರಿಂದ 15 ಲಕ್ಷ ರೂ. ವರಮಾನ ಬರುತ್ತದೆ. ನಾನು ಮನೆಯಲಿ ಇರುತ್ತೇನೆ. ನನಗೆ ಮತ್ತು ನನ್ನ ಮಗುವಿಗೆ ಉಪಜೀವನಕ್ಕಾಗಿ ಏನಾದರೂ ಬೇಕಾಗಿರುತ್ತದೆ.

ಮದುವೆ ಆಮಂತ್ರಣ ಪತ್ರಿಕೆ ನಿಪಿ **1** ಎಂದು, ಮದುವೆ ಸಮಯದ ಭಾವಚಿತ್ರಗಳನ್ನು ನಿಪಿ **2** ಎಂದು, ಎರಡನೇ ಅರ್ಜಿದಾರನ ಹುಟ್ಟುಹಬ್ಬದ ಭಾವಚಿತ್ರಗಳನ್ನು ನಿಪಿ **3** ಮತ್ತು **4** ಎಂದು, 2 ನೇ ಅರ್ಜಿದಾರನ ಜನನ ಪ್ರಮಾಣ ಪತ್ರವನ್ನು ನಿಪಿ **5** ಎಂದು ಗುರುತಿಸಲಾಯಿತು.

ಈ ಸಮಯದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ